## ಶಿವಮೊಗ್ಗ ಜಿಲ್ಲೆಯ ಹೊಸನಗರ ತಾಲ್ಲೂಕಿನಲ್ಲಿರುವ ಪ್ರೌಢಶಾಲೆಗಳಲ್ಲಿ ದೈಹಿಕ ಶಿಕ್ಷಕರ ಹುದ್ದೆ ಭರ್ತಿ

4492 (5288) : ಶ್ರೀ ಆರಗ ಜ್ಞಾನೇಂದ್ರ (ತೀರ್ಥಹಳ್ಳಿ) : ಮಾನ್ಯ ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ಪ್ರೌಢ ಶಾಲೆಗಳಲ್ಲಿರುವ ದೈಹಿಕ ಶಿಕ್ಷಕರ ಗ್ರೇಡ್– II ಹುದ್ದೆಗಳು ಎಷ್ಟು; ಯಾವ ಸಾಲಿನಿಂದ ಖಾಲಿ ಇದೆ;

ಆ) ಈ ಹುದ್ದೆಗಳನ್ನು ಗ್ರೇಡ್–Iಕ್ಕೆ ಏರಿಸಲು ಸರ್ಕಾರ ಯೋಚಿಸಿದೆಯೇ, ಹಾಗಿದ್ದಲ್ಲಿ ಯಾವಾಗ;

ಇ) ಶಿವಮೊಗ್ಗ ಜಿಲ್ಲೆ ಹೊಸನಗರ ತಾಲ್ಲೂಕು ಸಂಪೆಕಟ್ಟೆ ಪ್ರೌಢಶಾಲೆಯಲ್ಲಿದ್ದ ಗ್ರೇಡ್–Iರ ಹುದ್ದೆಯನ್ನು ಅಧ್ಯಾಪಕರ ಸಹಿತ ಹೊಸನಗರಕ್ಕೆ ಮತ್ತು ಅದೇ ರೀತಿ ತೀರ್ಥಹಳ್ಳಿ ತಾಲ್ಲೂಕು ಕಡ್ಡೂರು ಪ್ರೌಢಶಾಲೆಯಲ್ಲಿದ್ದ ಗ್ರೇಡ್–Iರ ಹುದ್ದೆಯನ್ನು ಅಧ್ಯಾಪಕರ ಸಹಿತ ಭದ್ರಾವತಿಗೆ ಸ್ಥಳಾಂತರಿಸಲು ಕಾರಣವೇನು;

ಈ) ಈ ರೀತಿ ಸ್ಥಳಾಂತರಿಸಲು ಅನುಮತಿ ನೀಡುವ ಅಧಿಕಾರಿ ಯಾರಿಗಿದೆ; ಈ ಪ್ರಕರಣದಲ್ಲಿ ಅನುಮತಿ ಪಡೆಯಲಾಗಿತ್ತೆ;

ಉ) ಅನುಮತಿ ಪಡೆಯದೆ ಸ್ಥಳಾಂತರಿಸಲಾಗಿದ್ದಲ್ಲಿ, ಸಂಬಂಧಪಟ್ಟ ಅಧಿಕಾರಿಗಳ ಮೇಲೆ ಕ್ರಮ ಜರುಗಿಸಲಾಗುವುದೇ;

ಊ) ಈ ಎರಡೂ ಶಾಲೆಯ ದೈಹಿಕ ಶಿಕ್ಷಕರ ಹುದೆ ಖಾಲಿ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಹಾಗಿದ್ದಲ್ಲಿ ಯಾವಾಗ ತುಂಬಲಾಗುವುದು?

ಪ್ರೊ. ಬಿ.ಕೆ. ಚಂದ್ರಶೇಖರ್ (ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ರಾಜ್ಯ ಸಚಿವರು)

ಅ) ಸರ್ಕಾರಿ ಪ್ರೌಢ ಶಾಲೆಗಳಲ್ಲಿ ದೈಹಿಕ ಶಿಕ್ಷಕರ ಗ್ರೇಡ್–2 ಹುದ್ದೆಗಳು ಒಟ್ಟು 1,136 ಅದರಲ್ಲಿ 123 ಹುದ್ದೆಗಳ ಖಾಲಿ ಇರುತ್ತವೆ. ಸದರಿ ಹುದ್ದೆಗಳು ನಿವೃತ್ತಿಯಿಂದ ಖಾಲಿ ಇರುತ್ತವೆ.

ಆ) ಪರಿಶೀಲಿಸಲಾಗುತ್ತಿದೆ.

ಇ) ಸಂಪೇಕಟ್ಟೆ ಹಾಗೂ ಕಡ್ಡೂರು ಪ್ರೌಢ ಶಾಲೆಗಳಲ್ಲಿ ಮಕ್ಕಳ ಸಂಖ್ಯೆ ಕಡಿಮೆಯಿರುವ ಕಾರಣದಿಂದ ಸಂಯುಕ್ತ ಪದವಿ ಪೂರ್ವ ಕಾಲೇಜು ಹೊಸನಗರ ಹಾಗೂ ಭದ್ರಾವತಿಗಳಲ್ಲಿ ಮಕ್ಕ ಸಂಖ್ಯೆ ಜಾಸ್ತಿ ಇರುವ ಕಾರಣ ಹುದ್ದೆಯನ್ನು ಅದಲು ಬದಲು ಮಾಡಲಾಗಿದೆ.

ವಿದ್ಯಾರ್ಥಿಗಳ ಸಂಖ್ಯೆ:

| | |
|---|---|
| ಸರ್ಕಾರಿ ಪ್ರೌಢಶಾಲೆ ಸಂಪೆಕಟ್ಟಿ | : 108 |
| ಸರ್ಕಾರಿ ಪ್ರೌಢಶಾಲೆ ಕಡ್ಡೂರು | : 141 |
| ಸರ್ಕಾರಿ ಸಂಯುಕ್ತ ಪ.ಪೂ.ಕಾ. ಹೊಸನಗರ | : 493 |
| ಸಂಚೆಹೊನ್ನಮ್ಮ ಸಂಯುಕ್ತ ಪ.ಪೂ.ಕಾ. ಭದ್ರಾವತಿ | : 763 |

ಈ) ಈ ರೀತಿ ಸ್ಥಳಾಂತರಿಸುವ ಅಧಿಕಾರ ನಿರ್ದೇಶಕರು (ಪ್ರೌಢ ಶಿಕ್ಷಣ) ರವರಿಗೆ ಇರುತ್ತದೆ. ಸದರಿ ಹುದ್ದೆಯನ್ನು ಸ್ಥಳಾಂತರಿಸಲು ಶಿವಮೊಗ್ಗ ಜಿಲ್ಲಾ ಉಪನಿರ್ದೇಶಕರು ಅನುಮತಿ ಪಡೆದಿರುತ್ತಾರೆ.

ಉ) ಅನುಮತಿ ಪಡೆದಿರುವುದರಿಂದ ಈ ಪ್ರಶ್ನೆ ಉದ್ಭವಿಸುವುದಿಲ್ಲ.

ಊ) ಹೌದು. ಸಂಯುಕ್ತ ಸ್ಪರ್ಧಾತ್ಮಕ ಪರೀಕ್ಷೆಯ ಮೂಲಕ ತುಂಬಲಾಗುವುದು.